**2 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ.**

**ದಿಃ 18.03.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ 2 ನೇ ಪ್ರತಿವಾದಿ ಪರ ವಕೀಲರಿಂದಃ**

2. ಇವತ್ತಿಗೂ ನಮ್ಮ ಮನೆಯ ಹಿರೆತನವನ್ನು ಪ್ರತಿವಾದಿ ನಂ.1 ಇವರೇ ಮಾಡುತ್ತಾರೆ ಎಂದರೆ ಸರಿ. ನನ್ನ ಮುಖ್ಯ ವಿಚಾರಣೆ ಪ್ರಮಾಣಪತ್ರದಲ್ಲಿ ನನ್ನ ಮಾವ ನಮ್ಮ ಕುಟುಂಬದ ಮೇಲೆ ಕೆಟ್ಟ ಪರಿಣಾಮ ಬೀರುವ ರೀತಿಯಲ್ಲಿ ದಾಖಲೆಗಳನ್ನು ಮಾಡಿರುತ್ತಾರೆಂದು ನಾನು ಹೇಳಿದ್ದು ಸದರಿ ದಾಖಲೆಗಳು ಯಾವವು ಎಂದು ನನಗೆ ಗೊತ್ತಿಲ್ಲ. ನನ್ನ ಗಂಡ ಜೀವಂತವಿರುವವರೆಗೂ ನಮ್ಮಿಬ್ಬರ ವ್ಯವಾಹಿಕ ಜೀವನ ಚೆನ್ನಾಗಿ ಇತ್ತು ಎಂದರೆ ಸರಿ. ಯಾವ ವರ್ಷದಲ್ಲಿ ನಮ್ಮ ಹೊಲದಲ್ಲಿ ಬೆಳೆದ ಬೆಳೆ ನಷ್ಟವಾಗಿರುತ್ತದೆಂದು ನನಗೆ ನೆನಪಿಲ್ಲ. ನಮ್ಮ ಬೆಳೆ ಹಾನಿಯಾದಾಗ ನಮಗೆ ಒಂದು ಲಕ್ಷದವರೆಗೆ ನಷ್ಟ ಉಂಟು ಆಗಿರುತ್ತದೆ. ನಮ್ಮ ಮನೆಯಲ್ಲಿ ಹಣಕಾಸಿನ ತೊಂದರೆ ಉಂಟಾದಾಗ ಪ್ರತಿವಾದಿ ನಂ.1 ಇವರೇ ಅದನ್ನು ಬಗೆಹರಿಸುತ್ತಿದ್ದರು. ಜನೆವರಿ 2023 ರಲ್ಲಿ ಉಪ ನೊಂದಣಾಧಿಕಾರಿ ಕಚೇರಿಗೆ ನಾನು, ನನ್ನ ಗಂಡ, ನನ್ನ ಮೈದುನ, ನನ್ನ ನೆಗೆನ್ನಿ, ನನ್ನ ಇಬ್ಬರು ನಾದಿನಿಯರು ಹೋಗಿದ್ದೇವು. ಅ ರೀತಿ ಹೋದ ದಿನಾಂಕ ಯಾವುದು ಎಂದು ನನಗೆ ಗೊತ್ತಿಲ್ಲ. ದಾಖಲೆ ನೊಂದಣಿಯಾದ ನಂತರ ನನ್ನ ಹೆಸರಿಗೆ ಉತಾರ ಬರುತ್ತದೆಂದು ಪ್ರತಿವಾದಿ ನಂ.1 ಇವರೇ ನನಗೆ ಹೇಳಿದ್ದರು. ನಾನು ಮತ್ತು ನನ್ನ ಗಂಡ ಪ್ರತ್ಯೇಕ ಉತಾರ ಮಾಡಿಕೊಂಡಿ ಎಂದು ಪ್ರತಿವಾದಿ ನಂ.1 ಇವರಿಗೆ ಕೇಳಿದ್ದೆವು. ನಂತರ ಹಿರಿಯರನ್ನು ಸಹ ಕೇಳಿರುತ್ತೇವೆ. ಯಾವ ಹಿರಿಯರು ಎಂದು ಹೆಸರು ಹೇಳಲು ಬರುತ್ತದೆಯಾ ಎಂದರೆ ಸಾಕ್ಷಿ ನನ್ನ ಗಂಡ ಹೋಗಿದ್ದರು ನಾನು ಹೋಗಿರಲಿಲ್ಲ ಎಂದು ನುಡಿಯುತ್ತಾರೆ.

3. ದಿಃ21/09/2023 ರಂದು ಪ್ರತಿವಾದಿ ನಂ.1 ಇವರಿಗೆ ನೋಟೀಸ್ ಕಳಹಿಸಿದ ವಿಷಯವನ್ನು ನನ್ನ ಗಂಡ ನನಗೆ ತಿಳಿಸಿದರು. ಸದರಿ ನೋಟೀಸ್‌ನಲ್ಲಿ ಏನು ಬರೆದಿದೆ ಎಂದು ತಿಳಿದುಕೊಂಡಿದ್ದಿರಾ ಎಂದರೆ ಸಾಕ್ಷಿ ನನಗೆ ಮತ್ತು ನನ್ನ ಗಂಡನಿಗೆ ಓದಲು ಬರೆಯಲು ಬರುವುದಿಲ್ಲ ಎಂದು ನುಡಿಯುತ್ತಾರೆ. ಪ್ರತಿವಾದಿ ನಂ.1 ಇವರಿಗೆ 51 ಲಕ್ಷ ಸಾಲ ಮಾಡುವ ಅವಶ್ಯಕತೆ ಇರಲಿಲ್ಲ ಎಂದರೆ ಸರಿ. ಸದರಿ ಸಾಲವನ್ನು ಅವರಿಗೆ ತೀರಿಸುವ ಸಾಮರ್ಥ್ಯ ಇರಲಿಲ್ಲ ಎಂದರೆ ಸಾಕ್ಷಿ ಅವರು ತಮ್ಮ ಚಟಕ್ಕೆ ಸಾಲ ಮಾಡಿದ್ದರು ಎಂದು ನುಡಿಯುತ್ತಾರೆ. ಪ್ರತಿವಾದಿ ನಂ.1 ಇವರ ಆದಾಯ ಲಕ್ಷಗಟ್ಟಲೆ ಇರಲಿಲ್ಲ ಎಂದರೆ ಸಾಕ್ಷಿ ಇತ್ತು ಎಂದು

ನುಡಿಯುತ್ತಾರೆ. ದಾವಾ ಆಸ್ತಿಯನ್ನು ಮಾರಾಟ ಮಾಡುವ ಉದ್ದೇಶದಿಂದ ಪ್ರತಿವಾದಿ ನಂ.1 ರವರು ಒಂದು ಕೋಟಿ ರೂ.ಗಳನ್ನು ಮುಂಗಡವಾಗಿ ಪಡೆದಿದ್ದರು ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿ ನಂ.1 ಇವರು ಪ್ರತಿವಾದಿ ನಂ.2 ಇವರ ಹೆಸರಿಗೆ ಮಾಡಿಕೊಟ್ಟ ಖರೀದಿ ಕರಾರುಪತ್ರವನ್ನು ನಾನು ಓದಿ ತಿಳಿದುಕೊಂಡಿಲ್ಲ ಕಾರಣ ನನಗೆ ಓದಲು ಬರೆಯಲು ಬರುವುದಿಲ್ಲ. ಸದರಿ ಸಂಚಕಾರ ಪತ್ರವನ್ನು ನಾವು ಈ ದಾವೆಯಲ್ಲಿ ಹಾಜರಪಡಿಸಿರುತ್ತೇವೆ ಅಥವಾ ಇಲ್ಲವೆಂದು ನನಗೆ ಗೊತ್ತಿಲ್ಲ. ಪ್ರತಿವಾದಿ ನಂ.2 ರವರು ಪ್ರತಿವಾದಿ ನಂ.1 ರವರಿಗೆ ನೋಟೀಸ್ ನೀಡಿದ ವಿಷಯವನ್ನು ನನ್ನ ಗಂಡ ನನಗೆ ತಿಳಿಸಿದರು. 50 ಲಕ್ಷ ರೂ.ಗಳಿಗೆ ಶೇ.2 ರಷ್ಟು ಬಡ್ಡಿ ಆಕರಣೆ ಮಾಡಿದರೆ ಪ್ರತಿತಿಂಗಳಿಗೆ ಒಂದು ಲಕ್ಷ ಬಡ್ಡಿಯಾಗುತ್ತದೆ ಎಂದರೆ ಸರಿ. ಪ್ರತಿವಾದಿ ನಂ.1 ಇವರಿಗೆ ಪ್ರತಿತಿಂಗಳು ಒಂದು ಲಕ್ಷ ಬಡ್ಡಿ ಕಟ್ಟುವಷ್ಟು ಆದಾಯ ಇಲ್ಲ ಎಂದರೆ ಸರಿ.

4. ಪ್ರತಿವಾದಿ ನಂ.1 ರವರು ಮೋಸತನದಿಂದ ದಾಖಲೆಗಳ ಮೇಲೆ ನನ್ನ ಸಹಿ ಪಡೆದಿರುತ್ತಾರೆಂದು ಯಾವುದೇ ಠಾಣೆಯಲ್ಲಿ ಅವರ ವಿರುದ್ಧ ಪಿರ್ಯಾದಿ ನೀಡಿಲ್ಲ. ಪ್ರತಿವಾದಿ ನಂ.1 ಇವರು ಪ್ರತಿವಾದಿ ನಂ.2 ರವರ ಹೆಸರಿಗೆ ಮಾಡಿಕೊಟ್ಟ ಖರೀದಿ ಕರಾರುಪತ್ರಕ್ಕೆ ನಾನು ಸಮ್ಮತಿ ಸಾಕ್ಷಿಯಾಗಿ ಸಹಿ ಮಾಡಿರುತ್ತೇನೆಂದರೆ ಸರಿ. ಸಾಕ್ಷಿಗೆ ಈ ಹಂತದಲ್ಲಿ ದಿಃ 04/01/2023 ರ ಖರೀದಿ ಕರಾರುಪತ್ರದ ದೃ.ನಕಲನ್ನು ತೋರಿಸಿ ಸದರಿ ದಾಖಲೆಯ ಮೇಲೆ ಸಾಕ್ಷಿ ತನ್ನ ಸಹಿ ಹಾಗೂ ಫೋಟೋ ಇದೆ ಎಂದು ಒಪ್ಪಿಕೊಂಡಿದ್ದು ಸದರಿ ದಾಖಲೆಯನ್ನು ನಿಡಿ.1 ಎಂದು ಗುರುತಿಸಲಾಯಿತು. ಸದರಿ ನಿಡಿ.1 ದಾಖಲೆಗೆ ನನ್ನ ಗಂಡ ಸಹ ಒಪ್ಪಿಗೆ ಸಾಕ್ಷಿದಾರರಾಗಿ ಸಹಿ ಮಾಡಿರುತ್ತಾರೆಂದರೆ ಸರಿ. ಸಾಕ್ಷಿ ಮುಂದುವರೆದು ಆದರೆ ಸದರಿ ದಾಖಲೆ ವಾಟ್ನಿ ಪತ್ರ ಎಂದು ಹೇಳಿ ನಮ್ಮಿಬ್ಬರ ಸಹಿ ಪಡೆದಿರುತ್ತಾರೆಂದು ನುಡಿಯುತ್ತಾರೆ. ನಿಡಿ.1 ದಾಖಲೆಗೆ ವಾದಿ ನಂ.2(ಎ) ರಿಂದ 2(ಸಿ) ಮತ್ತು ವಾದಿ ನಂ.3, 4 ಮತ್ತು 5 ಸಹ ಒಪ್ಪಿಗೆ ಸಾಕ್ಷಿಯಾಗಿ ಸಹಿ ಮಾಡಿರುತ್ತಾರೆಂದರೆ ಸರಿ. ಸಾಕ್ಷಿ ಮುಂದುವರೆದು ಆದರೆ ಸದರಿ ದಾಖಲೆ ವಾಟ್ನಿ ಪತ್ರ ಎಂದು ಹೇಳಿ ನಮ್ಮಿಬ್ಬರ ಸಹಿ ಪಡೆದಿರುತ್ತಾರೆಂದು ನುಡಿಯುತ್ತಾರೆ. ನಾವೆಲ್ಲ ನಿಡಿ.1 ದಾಖಲೆಗೆ ಸಹಿ ಮಾಡಿ ಪ್ರತಿವಾದಿ ನಂ.2 ಇವರ ಕಡೆಯಿಂದ ಮುಂಗಡ ಹಣ ಪಡೆದುಕೊಂಡಿದ್ದರೂ ಸಹ ಈಗ ಅವರಿಗೆ ಮೋಸ ಮಾಡುವ ಉದ್ದೇಶದಿಂದ ಇಲ್ಲವೆಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಡಿ.1 ರಡಿಯಲ್ಲಿ ಖರೀದಿ ಮುಂಗಡ ಹಣವನ್ನು ಪಡೆದುಕೊಂಡು ಪ್ರತಿವಾದಿ ನಂ.2 ಇವರಿಗೆ ಖರೀದಿ ಪತ್ರ ಮಾಡಿಕೊಡುವುದನ್ನು ತಪ್ಪಿಸುವ ಉದ್ದೇಶದಿಂದ ಹಾಗೂ ಅವರ ಹಣವನ್ನು ಎತ್ತಿಹಾಕುವ ಉದ್ದೇಶದಿಂದ ಸುಳ್ಳು ದಾವೆ ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ. ಬ್ಲಾಕ್

ನಂ.60/1 ರಲ್ಲಿ ಶಿವಪ್ಪ ಕಲ್ಲಪ್ಪ ಅವಟಿ ಎಂಬುವವರಿಗೆ ಮಾರಾಟ ಮಾಡಿದ 4 ಎಕರೆ ಆಸ್ತಿಯ ವಿಷಯವಾಗಿ ಈ ದಾವೆಯಲ್ಲಿ ನಾವು ಪರಿಹಾರ ಕೇಳಿಲ್ಲ ಎಂದರೆ ಸರಿ. ಸದರಿ ಶಿವಪ್ಪ ಕಲ್ಲಪ್ಪ ಅವಟಿ ಇವರು ಉದ್ದೇಶಪೂರ್ವಕವಾಗಿ ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸಾಕ್ಷಿ ಸದರಿ ಆಸ್ತಿಯನ್ನು ನನ್ನ ಮದುವೆ ಮುಂಚೆಯೇ ಮಾರಾಟ ಮಾಡಿರುತ್ತಾರೆಂದು ನುಡಿಯುತ್ತಾರೆ. ಈ ಕಾರಣಕ್ಕಾಗಿ ಈ ದಾವೆ ವಜಾ ಆಗಲು ಸೂಕ್ತವಾಗಿರುತ್ತದೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

Sd/-

**2 ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ.**